# ಸಮಾಜ ವಿಜ್ಞಾನ ವಿಷಯ ಸಮೂಹ ವೇದಿಕೆ ಹುನಗುಂದ – ಇಳಕಲ್

## ಎಸ್.ಎಸ್.ಎಲ್.ಸಿ. ರಾಜ್ಯಮಟ್ಟದ ಮಾದರಿ ಪ್ರಶ್ನೆ ಪತ್ರಿಕೆ ಮಾದರಿ ಉತ್ತರಗಳು – 2024

**ವಿಷಯ : ಸಮಾಜ ವಿಜ್ಞಾನ (85K) ಸಮಯ : 3–15 ನಿಮಿಷ. ಅಂಕ : 80**

---

**I ಬಹು ಆಯ್ಕೆ ಪ್ರಶ್ನೆಗಳು 8*1=08**

1. ಎ) ಪ್ಯಾರಿಸ್ ಒಪ್ಪಂದ.
2. ಬಿ) ಅಪರಾಧ ತೆರಿಗೆ.
3. ಬಿ) ಆಹಾರ ಮತ್ತು ಕೃಷಿ ಸಂಸ್ಥೆ
4. ಸಿ) ಬಾಲಕಾರ್ಮಿಕತೆ
5. ಸಿ) ಹಿರಾಕುಡ್ ಯೋಜನೆ ಪ್ರವಾಹವನ್ನು ನಿಯಂತ್ರಿಸುತ್ತದೆ.
6. ಎ) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ.
7. ಬಿ) ವಸತಿ ನಿರ್ಮಿಸಿ ಕೊಡುವುದು
8. ಡಿ) ಆವರ್ತ ಠೇವಣಿ ಖಾತೆ

**II ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ. 8*1=08**

9. ಲಾರ್ಡ ವೆಲ್ಲೆಸ್ಲಿ.
10. ಸಂವಾದ ಕೌಮುದಿ.
11. ಶಸ್ತ್ರಾಸ್ತ್ರಗಳ ಸ್ಪರ್ಧೆಯಿಂದ ವಿಶ್ವದಾದ್ಯಂತ ಭಯ, ಅಸ್ಥಿರತೆ, ಚಡಪಡಿಕೆ ಹಾಗೂ ಯುದ್ಧಸಂಭವ ತಲೆದೋರುವುದರಿಂದ ಪ್ರತಿಪಾದಿಸುತ್ತದೆ.
12. ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆ ಆಗಿದೆ.
13. ಗೃಹಿಣಿ, ಕಲಾಕಾರ.
14. ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಾಣವಾಗಿರುವುದರಿಂದ ಕರೆಯುತ್ತಾರೆ.
15. ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು.
16. ಜಿಲ್ಲಾ ಗ್ರಾಹಕ ವೇದಿಕೆ

**III ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. 8*2=16**

**17. ಮಹಿಳಾ ಸ್ವ–ಸಹಾಯ ಸಮೂಹಗಳ ಪ್ರಾಮುಖ್ಯತೆ ವಿವರಿಸಿರಿ.**

- ಸ್ತ್ರೀಯರ ಸಾಮಾಜಿಕ ಶಕ್ತಿ ಬಲವರ್ಧನೆ.
- ಸ್ವಾವಲಂಬಿ ಜೀವನಕ್ಕೆ ಸಹಾಯಕ.
- ಸ್ತ್ರೀಯರ ಮೇಲಿನ ದೌರ್ಜನ್ಯಕ್ಕೆ ತಡೆ.
- ಸ್ತ್ರೀಯರಿಗೆ ಸ್ವಾತಂತ್ರ್ಯ.
- ಸ್ತ್ರೀಯರಿಗೆ ಹಕ್ಕು, ಗೌರವ ಅಧಿಕಾರ.
- ಸ್ತ್ರೀಯರ ಆರ್ಥಿಕ ಸಬಲೀಕರಣ.

**ಅಥವಾ**

**ಭಾರತದಲ್ಲಿ ವರದಕ್ಷಿಣೆ ನಿಷೇಧವು ಅತ್ಯಂತ ಅವಶ್ಯಕವಾಗಿದೆ. ಏಕೆಂದರೆ**

- ಸ್ತ್ರೀಯರ ಸ್ವಾಭಿಮಾನಕ್ಕೆ ಧಕ್ಕೆ.
- ಸ್ತ್ರೀಯರ ಗೌರವ, ಸ್ಥಾನಮಾನ ಕುಗ್ಗಿಸುತ್ತದೆ.
- ಕೌಟುಂಬಿಕ ಕಲಹ.
- ಸ್ತ್ರೀ ಪುರುಷರ ನಡುವೆ ಒಡಕು.
- ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚಳ.
- ಕೌಟುಂಬಿಕ ಸಂಬಂಧಗಳಿಗೆ ಧಕ್ಕೆ.
- ಅಧಿಕ ಮೋಸದ ವಿವಾಹಗಳು.
- ಹೆಣ್ಣು ಭ್ರೂಣ ಮತ್ತು ಶಿಶು ಹತ್ಯೆ ಹೆಚ್ಚಳ.
- ವಿವಾಹ ವಿಚ್ಛೇದನ ಪ್ರಕರಣ ಹೆಚ್ಚಳ.

**18. 'ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತದ ಹೋರಾಟ**

- ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ.
- ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ನಮೂದು.
- ಸಾಮಾನ್ಯ ಸಭೆಯಲ್ಲಿ ಮಾನವ ಹಕ್ಕುಗಳ ಪ್ರತಿಪಾದನೆ.
- ಭಾರತದಿಂದ ಜನಾಂಗ ಹತ್ಯೆ, ಶೋಷಣೆ & ದಬ್ಬಾಳಿಕೆಗೆ ವಿರೋಧ
- ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ರಕ್ಷಣೆಗೆ ಯತ್ನ

**ಅಥವಾ**

**ವಿಶ್ವದ ಜನರ ಆರೋಗ್ಯ ಸುಧಾರಣೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯಪಾತ್ರ**

- ವಿಶ್ವದ ಜನರ ಆರೋಗ್ಯ ಸುಧಾರಣೆ.
- ಕಾಲರಾ, ಪ್ಲೇಗ್, ಮಲೇರಿಯಾ, ಸಿಡುಬು ನಿಯಂತ್ರಣ.
- ವಿಶ್ವವನ್ನು ಏಡ್ಸ್, ಕ್ಯಾನ್ಸರ್‌ನಿಂದ ಮುಕ್ತಿಗೊಳಿಸುವುದು.
- ಸಿಡುಬು ರೋಗ ಸಂಪೂರ್ಣ ನಿವಾರಣೆ.
- ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆಗೆ ಬದ್ಧ.
- ಹಸಿವು, ಅಪೌಷ್ಟಿಕತೆ ಇದರ ಕಾರ್ಯಸೂಚಿಯಲ್ಲಿವೆ.

**19. ಅನಿಬೆಸೆಂಟರು ಭಾರತದ ಇತಿಹಾಸದಲ್ಲಿ ಚಿರಸ್ಮರಣೀಯಾಗಿದ್ದಾರೆ. ಹೇಗೆಂದರೆ**

- ಥಿಯಾಸಾಫಿಕಲ್ ಸೊಸೈಟಿಯ ಕಾರ್ಯ ಚಟುವಟಿಕೆಗಳಿಗೆ ನವಚೈತನ್ಯ ತುಂಬಿದರು.
- ಉಪನ್ಯಾಸಗಳ ಮೂಲಕ ಭಾರತೀಯ ಸಂಸ್ಕೃತಿಯ ಅಭಿಮಾನ ಬಿತ್ತಿದರು.
- ಸಮಾಜದಲ್ಲಿ ಸಮಾನತೆ ಮತ್ತು ವಿಶ್ವಸೋದರತೆ ವೃದ್ಧಿಸಲು ಯತ್ನ.
- ನ್ಯೂ ಇಂಡಿಯಾ ಪತ್ರಿಕೆ ಆರಂಭ.
- 1916 ರಲ್ಲಿ ಹೋಂರೂಲ್ ಚಳುವಳಿ ಪ್ರಾರಂಭ.
- 1917ರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ.
- ಭಾರತೀಯ ತಾತ್ವಿಕತೆಗೆ ಕೊಡುಗೆ.
- ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿ.

**20. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿಶ್ಲೇಷಿಸಿರಿ.**

- ದಾದಾಬಾಯಿ ನವರೋಜಿಯಿಂದ ಮಂಡನೆ.
- ಇಂಗ್ಲೆಂಡಿಗೆ ಸೋರಿ ಹೋಗುವ ಸಂಪತ್ತಿನ ವಿಶ್ಲೇಷಣೆ.
- ಆಮದು ಹೆಚ್ಚಳ, ರಫ್ತು ಇಳಿಕೆ.
- ಇದರಿಂದ ಪ್ರತಿಕೂಲ ಸಂದಾಯ ಉಂಟಾಯಿತು.
- ಭಾರತದ ಸಂಪತ್ತು ಇಂಗ್ಲೆಂಡಿಗೆ ಹರಿದುಹೋಯಿತು.

**21. ಭಾರತದ ವ್ಯವಸಾಯವು 'ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ' ಹೇಗೆಂದರೆ**

- ಮಾನ್ಸೂನ್ ಮಾರುತಗಳಿಂದ ಕೃಷಿಯ ನಿಯಂತ್ರಣ.
- ಮಳೆ ವಿಫಲವಾದರೆ ಬರಗಾಲ ಸಂಭವ.
- ಅಧಿಕ ಮಳೆಯಿಂದ ಪ್ರವಾಹ ಸಾಧ್ಯತೆ.
- ಪ್ರಾಣಿ ಹಾನಿ & ಆಸ್ತಿ ನಾಶ.

**22. ಭತ್ತ ಬೆಳೆಯಲು ಬೇಕಾದ ಪೂರಕಾಂಶಗಳು**

- ಖಾರೀಫ್ (ಮುಂಗಾರು) ಬೆಳೆ.
- ಉಷ್ಣ ವಲಯದ ಬೆಳೆ.
- $25^0$ ಸೆ. ಉಷ್ಣಾಂಶ ಅವಶ್ಯಕ.
- 100–200 ಸೆಂ.ಮೀ. ವಾರ್ಷಿಕ ಮಳೆ ಅಗತ್ಯ.
- ಮೆಕ್ಕಲು, ಜೇಡಿ ಮಣ್ಣು ಸೂಕ್ತ.
- ಸಮತಟ್ಟಾದ ಭೂಮಿ ಅಗತ್ಯ.

**23. ವೈಯಕ್ತಿಕ (ಖಾಸಗಿ) ಮತ್ತು ಸಾರ್ವಜನಿಕ ಹಣಕಾಸಿನ ವ್ಯತ್ಯಾಸ**

| ವೈಯಕ್ತಿಕ ಹಣಕಾಸು | ಸಾರ್ವಜನಿಕ ಹಣಕಾಸು |
|---|---|
| • ವ್ಯಕ್ತಿಯ ಆದಾಯ–ವೆಚ್ಚಕ್ಕೆ ಸಂಬಂಧಿಸಿದೆ.<br>• ಆದಾಯ ಅಂದಾಜಿಸಿ,<br>• ವೆಚ್ಚ ಮಾಡಲಾಗುತ್ತದೆ.<br>• ಹಣಕಾಸಿನ ವ್ಯವಹಾರ ಗೌಪ್ಯವಾಗಿಡಲಾಗುತ್ತದೆ.<br>• ಉಳಿತಾಯದಿಂದ ಕುಟುಂಬದ ಪ್ರಗತಿಗೆ ಪೂರಕ. | • . ಸರಕಾರದ ಆದಾಯ–ವೆಚ್ಚಕ್ಕೆ ಸಂಬಂಧಿಸಿದೆ.<br>• ವೆಚ್ಚ ಅಂದಾಜು ಮಾಡಿ, ಆದಾಯ ಹೊಂದಾಣಿಕೆ.<br>• ಶಾಸನ ಸಭೆಯಲ್ಲಿ ಚರ್ಚೆ, ಮಾಧ್ಯಮಗಳಲ್ಲಿ ಪ್ರಚಾರಕ್ಕೆ ಯತ್ನ.<br>• ಆದಾಯಕ್ಕಿಂತ ಅಧಿಕ ಹಣ ವೆಚ್ಚ ಪ್ರಗತಿಗೆ ಪೂರಕ. |

**24.ಗ್ರಾಹಕ ನ್ಯಾಯಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು ಯಾವುವು?**

- ದೂರಿನ ಕೈಬರಹ ಅಥವಾ ಬೆರಳಚ್ಚು ಪ್ರತಿ.
- ದೂರು ಕೊಡುವವನ ಪೂರ್ಣ ವಿಳಾಸ.
- ದೂರಿನ ವ್ಯಾಪಾರಿಯ ಪೂರ್ಣ ಮಾಹಿತಿ.
- ಯಾವ ವಸ್ತು ನಷ್ಟವಾಗಿದೆ. & ಬೆಲೆ.
- ನಷ್ಟ ಪರಿಹಾರದ ಮೊತ್ತ ಲಗತ್ತಿಸಬೇಕು.
- ವಸ್ತುವಿನ ರಸೀದಿ ಅಥವಾ ಬಿಲ್ಲು.
- ದೂರಿಗೆ ನೊಂದಣಿ ಶುಲ್ಕವಿಲ್ಲ.

**IV ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿರಿ. 9*3=27**

**25. ಮಾರ್ತಾಂಡ ವರ್ಮನು ಡಚ್ಚರೊಂದಿಗೆ ಹೋರಾಡಿದ ಬಗೆ**

- ಡಚ್ಚರಿಂದ ತಿರುವಾಂಕೂರಿನ ಮೇಲೆ ಯುದ್ಧ
- ಕೊಳಚ್ಚಲ್ ಯುದ್ಧದಲ್ಲಿ ಮಾರ್ತಾಂಡವರ್ಮ ಮೇಲುಗೈ
- 24 ಡಚ್ಚ ಅಧಿಕಾರಿಗಳ ಬಂಧನ
- ಕೇರಳ & ತಮಿಳನಾಡಿನಲ್ಲಿ ಮೆಣಸಿನ ವ್ಯಾಪಾರದಲ್ಲಿ ಹಕ್ಕು ಸ್ಥಾಪನೆ
- ಡಚ್ಚರ ಹಿಡಿತದಿಂದ ಬಂದರುಗಳ ವಶ
- ಡಚ್ಚ ಪಡೆಗಳ ಸಂಪೂರ್ಣ ಶರಣಾಗತಿ

**ಅಥವಾ**

**ಮೊದಲನೇ ಮಹಾಯುದ್ಧದ ಪರಿಣಾಮಗಳು**

- ಜರ್ಮನಿಯಿಂದ ವರ್ಸೇಲ್ಸ್ ಒಪ್ಪಂದಕ್ಕೆ ಸಹಿ.
- ಆಸ್ಟ್ರೋ–ಹಂಗೇರಿ, ಅಟೋಮನ್ ಸಾಮ್ರಾಜ್ಯಗಳ ಅಂತ್ಯ.
- ಜರ್ಮನಿ ಅಧಿಕ ಪ್ರದೇಶ ಕಳೆದುಕೊಂಡಿತು.
- ಯುರೋಪಿನ ಭೂಪಟ ಬದಲಾವಣೆ.
- ರಾಷ್ಟ್ರಸಂಘ ರಚನೆ.
- ಸಣ್ಣ ಸ್ವತಂತ್ರ ರಾಷ್ಟ್ರಗಳ ಉದಯ.
- ಉಗ್ರ ರಾಷ್ಟ್ರೀಯತೆ, ಅವಮಾನಕರ ಭಾವನೆ ಬೆಳವಣಿಗೆ.
- ಆರ್ಥಿಕ ಕುಸಿತ ಉಂಟಾಯಿತು.
- ಸರ್ವಾಧಿಕಾರಿಗಳ ಬೆಳವಣಿಗೆ.

**26. ಅರಣ್ಯ ಸಂರಕ್ಷಣಾ ವಿಧಾನಗಳು**

- ಘರ್ಷಿತ ಮರಗಳ ತೆಗೆಯುವುದು.
- ಅರಣ್ಯ ರೋಗ ನಿಯಂತ್ರಣ.
- ಸಸಿ ನೆಡುವುದು.
- ಬೀಜ ಹರಡುವುದು.
- ಅಕ್ರಮ ಮರ ಕಡಿಯುವುದಕ್ಕೆ ನಿಷೇಧ.
- ಮೇಯಿಸುವಿಕೆಗೆ ತಡೆ.
- ಮರ ನೆಡಲು ಪ್ರೋತ್ಸಾಹ.
- ಸಾಮಾಜಿಕ ಅರಣ್ಯ ಯೋಜನೆ.

**ಅಥವಾ**

**ಕೈಗಾರಿಕೆ ಸ್ಥಾನೀಕರಣದ ಮೇಲೆ ಪ್ರಭಾವ ಅಂಶಗಳು**

- ಕಚ್ಚಾವಸ್ತುಗಳು.
- ಮಾರುಕಟ್ಟೆ.
- ಕಾರ್ಮಿಕರ ಪೂರೈಕೆ.
- ಭೂಮಿ ಲಭ್ಯತೆ.
- ಸರಕಾರದ ನೀತಿ ನಿಯಮ.
- ಶಕ್ತಿ ಸಂಪನ್ಮೂಲಗಳು.
- ಸಂಚಾರ ಸೌಲಭ್ಯ.
- ಬಂದರುಗಳ ಸೌಲಭ್ಯ.
- ತಾಂತ್ರಿಕತೆ.

**27. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳು ಯಾವುವು?**

- ಭೀಕರ ಬರಗಾಲ.
- ಕೃಷಿ ಉತ್ಪಾದನೆ ಕುಸಿತ.
- ಅಹಾರ ಧಾನ್ಯಗಳ ಕೊರತೆ.
- ಹೆಚ್ಚು ಇಳುವರಿ ಗೋಧಿ ತಳಿ ಸಂಶೋಧನೆ.
- ರಾಸಾಯನಿಕ ಗೊಬ್ಬರಗಳ ಬಳಕೆ.
- ಜೈವಿಕ ಕ್ರಿಮಿನಾಶಕಗಳ ಬಳಕೆ.
- ಅಧಿಕ ಇಳುವರಿ ಬೀಜಗಳ ಬಳಕೆ.

**ಅಥವಾ**

**ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಪಾತ್ರ**

- ಮೂಲ ಸೌಕರ್ಯ ಕಲ್ಪಿಸುವುದು.
- ಮಾನವ ಸಂಪನ್ಮೂಲ ಅಭಿವೃದ್ಧಿ.
- ಉದ್ಯೋಗಾವಕಾಶ ಒದಗಿಸುವುದು.
- ಕೃಷಿ, ನೀರಾವರಿ ವಿಸ್ತರಣೆ.
- ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ.
- ಬಡತನ ನಿರ್ಮೂಲನೆ
- ನಿರುದ್ಯೋಗ ನಿವಾರಣೆ.
- ಗ್ರಾಮೀಣ ಸಂಸ್ಕೃತಿ ಶ್ರೀಮಂತಗೊಳಿಸುವುದು.
- ಅರ್ಹರಿಗೆ ಸರ್ಕಾರದ ಸೌಲಭ್ಯ.

**28. ಅಂಚೆ ಕಚೇರಿಗಳು ಸಾರ್ವಜನಿಕರಿಗೆ ಒದಗಿಸುವ ಸೇವೆಗಳು**

- ರಾಷ್ಟ್ರೀಯ ಉಳಿತಾಯ ಪತ್ರ.
- ಅಂಚೆ ಉಳಿತಾಯ ಖಾತೆ.
- ಕಿಸಾನ್ ವಿಕಾಸ ಪತ್ರ.
- ಮಹೆಯಾನ ತೀರು ಠೇವಣಿಗಳು.
- ಅಂಚೆ ವಿಮೆ.
- ನಿವೃತ್ತಿ ವೇತನ.
- ಹಣದ ವರ್ಗಾವಣೆ.

**ಅಥವಾ**

**ಉದ್ಯಮಶೀಲತೆಯ ಗುಣಲಕ್ಷಣಗಳಾವುವು?**

- ಸೃಜನಾತ್ಮಕ.
- ನಾಯಕತ್ವ
- ವಚನ ಬದ್ಧತೆ.
- ತಂಡ ಕಟ್ಟುವುದು.
- ನಿರ್ಧಾರ ಕೈಗೆತ್ತಿಕೊಳ್ಳುವುದು.
- ಕ್ರಿಯಾತ್ಮಕ.
- ಗುರಿಮುಟ್ಟುವಿಕೆ.
- ಸಮಸ್ಯೆಗೆ ಪರಿಹಾರ.
- ನಷ್ಟಭರಿತಕ್ಕೆ ಸಿದ್ಧ.
- ಪ್ರಚೋದನೆಯ ಸಾಧನ.

**29. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಮಾದರಿ ರಾಜ್ಯವಾಗಿತ್ತು. ಹೇಗೆಂದರೆ**

- ಪ್ರಾಥಮಿಕ ಶಾಲಾ ಶಿಕ್ಷಣ ಶುಲ್ಕ ರದ್ದು.
- ಮೈಸೂರು ವಿಶ್ವ ವಿದ್ಯಾಲಯ ಸ್ಥಾಪನೆ.
- ಭಾರತೀಯ ವಿಜ್ಞಾನ ಸಂಸ್ಥೆ ಸ್ಥಾಪನೆ. (1905)
- ನೀರಾವರಿ ಸೌಲಭ್ಯ.
- ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು.
- ವಿದೇಶಿ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿ ವೇತನ.
- ರೈಲು ಮಾರ್ಗ ನಿರ್ಮಾಣ.
- ಕೈಗಾರಿಕೆಗಳ ಸ್ಥಾಪನೆ.
- ನ್ಯಾಯ ವಿಧಾಯಕ ಸಭೆ ರಚನೆ.

**ಅಥವಾ**

**30. ಭಾರತವು ಸ್ವಾತಂತ್ರ್ಯ ನಂತರ ಎದುರಿಸಿದ ಸಮಸ್ಯೆಗಳು**

- ನಿರಾಶ್ರಿತರ ಸಮಸ್ಯೆ.
- ಸರ್ಕಾರದ ರಚನೆ.
- ಆಹಾರ ಉತ್ಪಾದನೆ.
- ಕೈಗಾರಿಕಗಳ ಬೆಳವಣಿಗೆ.
- ಕೋಮುಗಲಭೆಗಳು.
- ದೇಶೀಯ ಸಂಸ್ಥಾನಗಳ ವಿಲೀನೀಕರಣ.
- ಕೃಷಿ ಬೆಳವಣಿಗೆ.

**31. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳು**

- ಟಿಬೆಟ್ ವಿವಾದ.
- ಭಾರತ – ಚೀನಾ ಯುದ್ಧ. (1962)
- ಅರುಣಾಚಲ ಪ್ರದೇಶ ತನ್ನದೆಂದು ಪ್ರತಿಪಾದನೆ.
- ನಕ್ಸಲವಾದ ಸಮಸ್ಯೆ.
- ಗಡಿ ಸಮಸ್ಯೆ.
- ಅಣ್ವಸ್ತ್ರ ತಯಾರಿ.
- ವಿದೇಶಿ ವ್ಯಾಪಾರದ ಸವಾಲುಗಳು.
- ಗಡಿ ಅತಿಕ್ರಮಣ.

**32. ಹಿಮಾಲಯ ಪರ್ವತಗಳು ನಮಗೆ ಉಪಯುಕ್ತವಾಗಿವೆ. ಏಕೆಂದರೆ**

- ರಕ್ಷಣಾ ಕವಚ.
- ಶೀತಗಾಳಿ ತಡೆ.
- ನದಿಗಳ ಉಗಮಸ್ಥಾನ.
- ಜಲವಿದ್ಯುಚ್ಛಕ್ತಿ ಉತ್ಪಾದನೆ.
- ವಿಶಾಲ ಮೈದಾನಗಳು.
- ಸಸ್ಯ & ಪ್ರಾಣಿ ಸಂಕುಲಗಳ ಆಶ್ರಯತಾಣ.
- ಖನಿಜ ಸಂಪನ್ಮೂಲಗಳ ಆಗರ.
- ಪ್ರವಾಸೋದ್ದಿಮೆ ಹಾಗೂ ಧಾರ್ಮಿಕ ಕೇಂದ್ರ.

**33. ನಿರುದ್ಯೋಗ ಸಮಸ್ಯೆ ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ಏಕೆಂದರೆ**

- ಬಡತನ.
- ಭ್ರಷ್ಟಾಚಾರ.
- ಮೋಸ.
- ಕಳ್ಳತನ
- ಅನಾರೋಗ್ಯ.
- ಕೌಟುಂಬಿಕ ವಿಘಟನೆ.
- ವಂಚನೆ.
- ವ್ಯಭಿಚಾರ.

**V ಎಂಟು ವಾಕ್ಯಗಳ/ಅಂಶಗಳಲ್ಲಿ ಉತ್ತರಿಸಿರಿ. 4*4=16**

**34. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್‌ಚಂದ್ರ ಬೋಸರವರ ಪಾತ್ರ**

- ಸ್ವಾತಂತ್ರ್ಯಕ್ಕಾಗಿ ಜೀವನ ಮುಡುಪು.
- ನೇತಾಜಿ ಎಂದು ಖ್ಯಾತಿ ಪಡೆದಿದ್ದಾರೆ.
- ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆ.
- ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ.
- ತ್ರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ.(1938)
- ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪನೆ.
- ಸ್ವಾತಂತ್ರ್ಯಕ್ಕಾಗಿ ಗೃಹ ಬಂಧನ.
- ಹಿಟ್ಲರ್‌ನಿಂದ ಸಹಾಯ ಯಾಚನೆ.
- ಅಜಾದ್ ಹಿಂದ್ ರೇಡಿಯೋ ಮೂಲಕ ಭಾಷಣ ಪ್ರಸರಣ.
- ಐ.ಎನ್.ಎ ಸೈನ್ಯದ ಮುಖಂಡತ್ವ.
- ದೆಹಲಿ ಚಲೋ ಕರೆ.
- ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ ಎಂದು ಕರೆ.
- ವಿಮಾನ ಅಪಘಾತದಲ್ಲಿ ಮರಣ.

**ಅಥವಾ**

**ಬ್ರಿಟಿಷ್ ಶಿಕ್ಷಣವು ಭಾರತದಲ್ಲಿ ಪ್ರಗತಿಪರ ಧೋರಣೆಯುಳ್ಳ ಹೊಸ ತಲೆಮಾರನ್ನು ಸೃಷ್ಟಿಸಿತು. ಹೇಗೆಂದರೆ**

- ಭಾರತೀಯರಿಗೆ ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ ಪರಿಕಲ್ಪನೆ ಪರಿಚಯ.
- ಭಾರತೀಯರಲ್ಲಿ ರಾಷ್ಟೀಯವಾದ ಮನೋಭಾವ ಬೆಳವಣಿಗೆ.
- ಸ್ಥಳೀಯ ಭಾಷೆ, ಸಾಹಿತ್ಯ ರಚನೆಗೆ ಪ್ರೋತ್ಸಾಹ.
- ವೃತ್ತ ಪತ್ರಿಕೆಗಳ ಉದಯ ಮತ್ತು ಬೆಳವಣಿಗೆ.
- ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳವಣಿಗೆ.
- ಸ್ವಾತಂತ್ರ ಚಳುವಳಿಯ ಮೇಲೆ ಪ್ರಭಾವ.
- ಸಾಮಾಜಿಕ & ಧಾರ್ಮಿಕ ಸುಧಾರಣಾ ಚಳುವಳಿ ಆರಂಭ.
- ಭಾರತೀಯರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ.
- ಭಾರತೀಯರಲ್ಲಿ ಸಮೃದ್ಧ ಸಾಂಸ್ಕೃತಿಕ ಪರಂಪರೆ ಅರಿವು.
- ಹೊಸ ತಲೆಮಾರು ಸೃಷ್ಟಿ.

**35. 1857ರ ದಂಗೆಯ ವಿಫಲತೆಗೆ ಕಾರಣಗಳು**

- ದಂಗೆ ಭಾರತದಾದ್ಯಂತ ವ್ಯಾಪಿಸಿರಲಿಲ್ಲ.
- ಸ್ವಹಿತಾಸಕ್ತಿ & ಹಕ್ಕಿಗಾಗಿ ನಡೆದ ಹೋರಾಟ.
- ಯೋಜಿತ ದಂಗೆಯಾಗಿರಲಿಲ್ಲ.
- ಅನಿರೀಕ್ಷಿತ ಕಾರಣಗಳಿಂದ ಪ್ರೇರಿತವಾಗಿತ್ತು.
- ಭಾರತೀಯ ಸೈನಿಕರಲ್ಲಿನ ಭಿನ್ನತೆ.
- ಸೂಕ್ತ ಮಾರ್ಗದರ್ಶನ, ಸಂಘಟನೆಯ ಕೊರತೆ.
- ಸೇನಾ ನಾಯಕತ್ವ, ಮತ್ತು ಶಿಸ್ತಿನ ಕೊರತೆ.
- ಯುದ್ಧತಂತ್ರ, ಸೈನಿಕ ಪರಿಣತಿ ಇರಲಿಲ್ಲ.
- ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.
- ದೇಶೀಯ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ.

**36. ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸುವ ಅಂಶಗಳು**

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ಥಾಪನೆ.
- ಮಹಿಳಾ ಶಿಕ್ಷಣಕ್ಕೆ ಒತ್ತು.
- ಬಾಲ್ಯವಿವಾಹ ನಿಷೇಧ ಕಾಯ್ದೆ ಜಾರಿ.
- ವರದಕ್ಷಿಣೆ ನಿಷೇಧ ಕಾಯ್ದೆ ಜಾರಿ.
- ಸ್ತ್ರೀ ಶಕ್ತಿ ಕಾರ್ಯಕ್ರಮ.
- ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ.
- ಸ್ಥಳೀಯ ಸಂಸ್ಥೆಗಳಲ್ಲಿ ಶೇ 33% ಮಿಸಲಾತಿ.
- ರಾಜಕೀಯ ಮೀಸಲಾತಿ.
- ಉದ್ಯೋಗದಲ್ಲಿ ಮೀಸಲಾತಿ.
- ಮಹಿಳಾ ಆಯೋಗ ರಚನೆ.

**37.ಚಂಡಮಾರುತಗಳು ವಿನಾಶಕಾರಕಗಳಾಗಿವೆ. ಹೇಗೆಂದರೆ**

- ಜನಜೀವನ ಅಸ್ತವ್ಯಸ್ತ.
- ಅಪಾರ ಸಾವು ನೋವು.
- ಜಲರಾಶಿ ಲವಣಯುಕ್ತವಾಗುತ್ತವೆ.
- ಬೆಳೆಗಳು ನಾಶ.
- ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯದಲ್ಲಿ ವ್ಯತ್ಯಯ.
- ಸಾಂಕ್ರಾಮಿಕ ರೋಗಗಳಿಂದ ಹಾನಿ ಸಂಭವ.
- ಜನರಿಗೆ ಭೂಕಂಪದ ಅನಾಹುತಗಳ ಅರಿವು ಮೂಡಿಸುವುದು.
- ಶೀಘ್ರ ವೈದ್ಯಕೀಯ ಸೇವೆ ವ್ಯವಸ್ಥೆ

**38. ಭಾರತದ ನಕ್ಷೆ ಬರೆದು, ಕೆಳಗಿನ ಸ್ಥಳಗಳನ್ನು ಗುರುತಿಸಿರಿ. 1+4=5**

**ಎ) ಗೋವಿಂದ ಸಾಗರ ಬಿ) ಬಾಂಬೆ ಹೈ ಸಿ) 82 ಳ ಪೂರ್ವ ರೇಖಾಂಶ ಡಿ) ಇಂದಿರಾ ಪಾಯಿಂಟ್**

